# ಚೆನ್ನೈಯಲ್ಲಿ ಹಾಲಿವುಡ್!

ದಕ್ಷಿಣದ ಚಿತ್ರೋದ್ಯಮದಲ್ಲಿ ಹೊಸತನ್ನು ಸಾಧಿಸುವುದರಲ್ಲಿ, ಸೀಮೋಲ್ಲಂಘನ ಮಾಡುವುದರಲ್ಲಿ 'ಕೋಳಿವುಡ್' ತಮಿಳು ಯಾವತ್ತೂ ಒಂದು ಹೆಜ್ಜೆ ಮುಂದೆಯೇ. ಸಿನಿಮಾ ಬಿಸಿನೆಸ್ ಮಾಡೋದರಲ್ಲಿ ತಮಿಳರಿಂದ ಕನ್ನಡದವರು ಕಲಿಯುವುದು ಸಾಕಷ್ಟಿದೆ.

ಹಾಲಿವುಡ್‌ನ ದೈತ್ಯ ಸಿನಿಮಾ ಕಂಪೆನಿ ವಾರ್ನರ್ ಬ್ರದರ್ಸ್‌ನ ಹೆಸರನ್ನು ಎಲ್ಲರೂ ಕೇಳಿಯೇ ಇರುತ್ತೀರಿ. ಅವರೀಗ ತಮಿಳು ಚಿತ್ರರಂಗಕ್ಕೆ ಕಾಲಿಡುವುದು ಖಚಿತವಾಗಿದೆ. ತಮಿಳು ಚಿತ್ರಗಳನ್ನು ನಿರ್ಮಿಸುವುದು ಮತ್ತು ಡಿಸ್ಟ್ರಿಬ್ಯೂಷನ್ ಮಾಡುವುದು– ಎರಡಕ್ಕೂ ವಾರ್ನರ್ ಬ್ರದರ್ಸ್ ಸಿದ್ಧವಾಗಿದೆ.

2010ರಲ್ಲಿ ಹಾಲಿವುಡ್‌ನಲ್ಲಿ ವಾರ್ನರ್ ಬ್ರದರ್ಸ್ ಕೈ ಇಟ್ಟದ್ದೆಲ್ಲ ಚಿನ್ನವಾಗಿದೆ. ಈಗಾಗಲೆ ಟರ್ಮಿನೇಟರ್ ಸಾಲ್ವೇಷನ್, ದಿ ಹ್ಯಾಂಗೋವರ್, 17 ಎಗೈನ್, ಶೆರ್ಲಾಕ್ ಹೋಮ್ಸ್, ಇನ್‌ಸೆಪ್ಷನ್, ಹ್ಯಾರಿ ಪಾಟರ್ ಸರಣಿ ಚಿತ್ರಗಳ ಮೂಲಕ 'ಚಿನ್ನದ ಗಣಿ' ತೋಡಿರುವ ವಾರ್ನರ್ ಬ್ರದರ್ಸ್ ಕೋಟ್ಯಂತರ ಡಾಲರ್ ಬಂಡವಾಳ ಹಾಕುವುದರಲ್ಲಿ ಯಾವತ್ತೂ ಮುಂದು. ಜತೆಗೆ ವೃತ್ತಿಪರ ನಿರ್ಮಾಣಕ್ಕೂ ಹೆಸರುವಾಸಿ. ವರ್ಷದ ಹಿಂದೆ ಸೌಂದರ್ಯ ರಜನಿಕಾಂತ್ ಕಂಪೆನಿಯ ಜತೆಗೆ ವಾರ್ನರ್ ಬ್ರದರ್ಸ್ ಒಪ್ಪಂದಕ್ಕೆ ಸಹಿ ಹಾಕಿತ್ತಾದರೂ ಅದ್ಯಾಕೋ ಬರಖತ್ತಾಗಲಿಲ್ಲ.



ಈ ಮಧ್ಯೆ ಫಾಕ್ಸ್ ಸ್ಟಾರ್ ಸ್ಟುಡಿಯೊ ಕೂಡಾ ತಮಿಳು ಚಿತ್ರರಂಗಕ್ಕೆ ಎಂಟ್ರಿ ಆಗಿದೆ. ತಮಿಳಿನ ಸ್ಟಾರ್ ನಿರ್ದೇಶಕ ಮುರುಗಾದಾಸ್ ಅವರ ಕಂಪೆನಿ ಜತೆ ಎರಡು ಸಿನಿಮಾಗಳಿಗೆ ಬಂಡವಾಳ ಹೂಡಲು ಫಾಕ್ಸ್ ಎರಡು ವಾರಗಳ ಹಿಂದೆಯೇ ಸಹಿ ಹಾಕಿದೆ. ಒಟ್ಟಾರೆ ತಮಿಳು ಚಿತ್ರರಂಗಕ್ಕಿದು ಶುಕ್ರದೆಸೆಯ ಕಾಲ.



# ಗೆದ್ದ ನಮಿತಾ

ದಕ್ಷಿಣದ ಸೆಕ್ಸೀ ತಾರೆ ನಮಿತಾ ಕಾಲ ಮುಗಿಯಿತು ಎಂದುಕೊಂಡವರು ಬೆಚ್ಚಿ ಬೀಳುವಂತೆ ಆಕೆಯ ಹೊಸ ಚಿತ್ರ 'ಬ್ಲ್ಯಾಕ್ ಸ್ವಾಲನ್' ಹಣ ಬಾಚಿಕೊಂಡಿದೆ. ವಿಮರ್ಶಕರು 'ಇದೊಂದು ಕೆಟ್ಟ ಚಿತ್ರ' ಎಂದು ಕಸದ ಬುಟ್ಟಿಗೆ ಹಾಕಿದ್ದರು. ಆದರೆ ನಮಿತಾಪ್ರಿಯರು ಕೈ ಬಿಟ್ಟಿಲ್ಲ. ಮಲಯಾಳಂ, ತಮಿಳು, ತೆಲುಗು ಮೂರೂ ಭಾಷೆಗಳಲ್ಲಿ ಚಿತ್ರ ಗೆದ್ದಿದೆ. ಕಲಾಭವನ್ ಮಣಿ ಜತೆ, ಬಾರ್ ಡ್ಯಾನ್ಸರ್ ಪಾತ್ರದಲ್ಲಿ ನಟಿಸಿರುವ ನಮಿತಾ ಬಟ್ಟೆಯ ಬಗ್ಗೆ ಹಿಂದೆಂದಿಗಿಂತಲೂ ಉದಾರಿಯಾಗಿರುವುದು ಆಕೆಯ ಮನೆಮುಂದೆ ನಿರ್ಮಾಪಕರ ದಂಡನ್ನೇ ನಿಲ್ಲಿಸಿದೆ. ಅಂತೂ ನಿರ್ಮಾಪಕರು ಚೆಲ್ಲಿದ 2.85 ಕೋಟಿ ವ್ಯರ್ಥವಾಗಲಿಲ್ಲ!



# ಲ್ಯಾಕ್ಮೆಗೆ ಶ್ರದ್ಧಾ

ಶಕ್ತಿ ಕಪೂರನ ಮಗಳು ಶ್ರದ್ಧಾ ಇದೀಗ ಲ್ಯಾಕ್ಮೆ ಕಂಪೆನಿಯ ಪ್ರಚಾರ ರಾಯಭಾರಿ ಆಗಿದ್ದಾಳೆ. ಕೃಷ್ಣಸುಂದರಿ ರೇಖಾ, ಐಶ್ವರ್ಯ ರೈಯಿಂದ ಹಿಡಿದು ಕತ್ರೀನಾ ಕೈಫ್‌ವರೆಗೂ ಸುಂದರಿಯರೆಲ್ಲ ಈ ಹುದ್ದೆಯಲ್ಲಿ ಇದ್ದವರೇ. ಆ ಹಾದಿಯಲ್ಲೇ ನಡೆದಿರುವ ಶ್ರದ್ಧಾ ಬಾಲಿವುಡ್‌ನಲ್ಲೂ ಹೊಸ ಅವಕಾಶಗಳಿಗೆ ಕಾದು ಕುಳಿತಿದ್ದಾಳೆ. ಆಕೆ ನಟಿಸಿದ ಮೊದಲ ಚಿತ್ರ 'ತೀನ್‌ಪತ್ತಿ' ವಿಮರ್ಶಕರಿಂದ ಸಾಕಷ್ಟು ಮೆಚ್ಚುಗೆ ಗಳಿಸಿದರೂ ಬಾಕ್ಸಾಫೀಸಲ್ಲಿ ಸುಖ ಕಾಣಲಿಲ್ಲ. ಅಮಿತಾಭ್ ಬಚ್ಚನ್, ಬೆನ್ ಕಿಂಗ್‌ಸ್ಲೇಯಂತಹ ಅದ್ಭುತ ನಟರ ಜತೆ ನಟಿಸಿದ್ದೇ ಭಾಗ್ಯ ಎಂದು ಶ್ರದ್ಧಾ ಸುಮ್ಮನೆ ಕುಳಿತಿಲ್ಲ. 'ಆದರೆ ಒಳ್ಳೆಯ ಚಿತ್ರಕಥೆ ಇಲ್ಲದೆ ಸಿನಿಮಾ ಹೇಗೆ ಒಪ್ಪಿಕೊಳ್ಳಲಿ..?' ಎನ್ನುವುದು ಆಕೆಯ ಪ್ರಶ್ನೆ. ಬಾಲಿವುಡ್‌ನ ಹೊಸ ಹೀರೋಯಿನ್‌ಗಳಲ್ಲಿ ಈ ಪ್ರಶ್ನೆ ಕೇಳುವವರು ಕಡಿಮೆಯೇ.

■ ಬಿಂದು